## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2013–14ನೇ ಸಾಲಿನ ಪ್ರತಿ ಜಿಲ್ಲಾ ಪಂಚಾಯತಿಗೆ 2.00 ಕೋಟಿ ರೂಪಾಯಿಗಳ ಅಭಿವೃದ್ಧಿ ಅನುದಾನದ 4ನೇ ಕಂತನ್ನು ಒದಗಿಸುವ ಕುರಿತು.

**ಓದಲಾಗಿದೆ:**

(1) ಮಾನ್ಯ ಮುಖ್ಯಮಂತ್ರಿಗಳ 2013–14ನೇ ಸಾಲಿನ ಆಯವ್ಯಯ ಭಾಷಣ.,
(2) ಸರ್ಕಾರಿ ಆದ್ರೇಶ ಸಂಖ್ಯೆ: ಗ್ರಾಅಪ 75 ಜಿಪಸ 2013, ದಿನಾಂಕ: 06–05–2013,
(3) ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 75 ಜಿಪಸ 2013, ದಿನಾಂಕ: 17–07–2013.
(4) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ: 68:ಜಿಪಸ:2013 ದಿನಾಂಕ: 30–05–2013.
(5) ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ : 68 :ಜಿಪಸ :2013 ದಿನಾಂಕ : 02.09.2013.
(6) ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ : 68 :ಜಿಪಸ :2013 ದಿನಾಂಕ : 23.12.2013.

**ಪ್ರಸ್ತಾವನೆ:**

ಮಾನ್ಯ ಮುಖ್ಯಮಂತ್ರಿಗಳು 2013–14ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಜಿಲ್ಲಾ ಪಂಚಾಯತ್‌ಗಳಲ್ಲಿ ಕೈಗೊಳ್ಳುವ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಅನುದಾನವನ್ನು ನೀಡಲು ನಿರ್ಧರಿಸಿರುವಂತೆ ಲೆಕ್ಕ ಶೀರ್ಷಿಕೆ 2515–00–101–0–31–051 ಲಿಂಕ್ ಕೋಡ್ ಲೆಕ್ಕ ಶೀರ್ಷಿಕೆ:2515–00–196–1–22–300 (ಯೋಜನೆ) ರಡಿ 6000.00 ಲಕ್ಷ ರೂಪಾಯಿಗಳ ಅನುದಾನವನ್ನು ಒದಗಿಸಲಾಗಿರುತ್ತದೆ.

ಮೇಲೆ ಓದಲಾದ (2)ರ ಸರ್ಕಾರಿ ಆದೇಶದಲ್ಲಿ ಜಿಲ್ಲಾ ಪಂಚಾಯತಿಗೆ ಒದಗಿಸಿರುವ ಅಭಿವೃದ್ಧಿ ಅನುದಾನದಲ್ಲಿ ಕ್ರಿಯಾ ಯೋಜನೆ ತಯಾರಿಸಿ ಅನುಷ್ಠಾನಗೊಳಿಸುವ ಬಗ್ಗೆ ಸವಿವರವಾಗಿ ಮಾರ್ಗಸೂಚಿಯನ್ನು ಹೊರಡಿಸಲಾಗಿತ್ತು. ಈ ಮಾರ್ಗಸೂಚಿಯನ್ನು ಮೇಲೆ ಓದಲಾದ(3)ರ ಸರ್ಕಾರಿ ಆದೇಶದಲ್ಲಿ ಪರಿಷ್ಕರಿಸಲಾಗಿದೆ.

ಮೇಲೆ ಓದಲಾದ (4)ರ ಸರ್ಕಾರಿ ಆದೇಶದಲ್ಲಿ 2013–14ನೇ ಸಾಲಿನ ಮೊದಲನೇ ತ್ರೈಮಾಸಿಕ ಅನುದಾನವನ್ನು ಪ್ರತಿ ಜಿಲ್ಲಾ ಪಂಚಾಯತಿಗೆ ರೂಪಾಯಿ 50.00 ಲಕ್ಷಗಳಂತೆ ಒಟ್ಟು ರೂಪಾಯಿ 1500.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ ಹಾಗೂ ಮೇಲೆ ಓದಲಾದ (5)ರ ಸರ್ಕಾರಿ ಆದೇಶದಲ್ಲಿ 2013–14ನೇ ಸಾಲಿನ ಎರಡನೇ ತ್ರೈಮಾಸಿಕ ಅನುದಾನವನ್ನು ಪ್ರತಿ ಜಿಲ್ಲಾ ಪಂಚಾಯತಿಗೆ ರೂಪಾಯಿ 50.00 ಲಕ್ಷಗಳಂತೆ ಒಟ್ಟು ರೂಪಾಯಿ 1500.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ ಮತ್ತು 2013–14ನೇ ಸಾಲಿನ ಮೂರನೇ ತ್ರೈಮಾಸಿಕ ಅನುದಾನವನ್ನು ಪ್ರತಿ ಜಿಲ್ಲಾ ಪಂಚಾಯತಿಗೆ ರೂಪಾಯಿ 50.00 ಲಕ್ಷಗಳಂತೆ ಒಟ್ಟು ರೂಪಾಯಿ 1500.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಪ್ರಸ್ತುತ 2013–14ನೇ ಸಾಲಿನ ನಾಲ್ಕನೇ ಹಾಗೂ ಕೊನೆಯ ತ್ರೈಮಾಸಿಕ ಅನುದಾನವನ್ನು ಪ್ರತಿ ಜಿಲ್ಲಾ ಪಂಚಾಯತಿಗೆ ರೂಪಾಯಿ 50.00 ಲಕ್ಷಗಳಂತೆ ಒಟ್ಟು ರೂಪಾಯಿ 1500.00 ಲಕ್ಷಗಳನ್ನು (ಒಂದು ಸಾವಿರದ ಐನೂರು ಲಕ್ಷ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 68 ಜಿಪಸ 2013 ಬೆಂಗಳೂರು ದಿನಾಂಕ: 12.02.2014**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಲೆಕ್ಕ ಶೀರ್ಷಿಕೆ 2515–00–101–0–31–051 ರಡಿಯಲ್ಲಿ ಲಿಂಕ್ ಕೋಡ್ ಲೆಕ್ಕ ಶೀರ್ಷಿಕೆ 2515–00–196–1–22–300 (ಯೋಜನೆ) ರಡಿ ಪ್ರತಿ ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅನುದಾನ ರೂಪಾಯಿ 200.00 ಲಕ್ಷಗಳಲ್ಲಿ ಪ್ರತಿ ಜಿಲ್ಲಾ ಪಂಚಾಯತಿಗೆ ನಾಲ್ಕನೆಯ ಹಾಗೂ ಕೊನೆಯ ತ್ರೈಮಾಸಿಕ ಕಂತಾಗಿ ರೂಪಾಯಿ 50.00 ಲಕ್ಷಗಳಂತೆ (ಐವತ್ತು ಲಕ್ಷ ರೂಪಾಯಿ ಮಾತ್ರ) ಒಟ್ಟು

30 ಜಿಲ್ಲಾ ಪಂಚಾಯತ್‌ಗಳಿಗೆ ರೂಪಾಯಿ 1500.00 ಲಕ್ಷಗಳನ್ನು (ಒಂದು ಸಾವಿರದ ಐನೂರು ಲಕ್ಷ ರೂಪಾಯಿಗಳು ಮಾತ್ರ) ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಂತೆ ಬಿಡುಗಡೆಗೊಳಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ :ಗ್ರಾಅಪ 75 ಜಿಪಸ 2013 ದಿನಾಂಕ :17.07.2013 ರಲ್ಲಿಯ ಮಾರ್ಗಸೂಚಿಯನ್ವಯ ಕಡ್ಡಾಯವಾಗಿ 2013-14ನೇ ಸಾಲಿನ ಕ್ರಿಯಾ ಯೋಜನೆಯನ್ನು ತಯಾರಿಸಿ ಯೋಜನೆಯನ್ನು ಅನುಷ್ಠಾನಗೊಳಿಸುವುದು. ಈ ಮಾರ್ಗಸೂಚಿಯಲ್ಲಿರುವ ಷರತ್ತುಗಳನ್ನು ಈಗಾಗಲೇ ಓದಲಾದ (3)ರ ಸರ್ಕಾರಿ ಆದೇಶದಲ್ಲಿ ವಿವರಿಸಿದಂತೆ ಮತ್ತೊಮ್ಮೆ ಈ ಕೆಳಕಂಡಂತೆ ವಿವರಿಸಿದೆ.

1. ವಾರ್ಷಿಕ ಹಂಚಿಕೆಯಾಗುವ ಅನುದಾನ ರೂ.200.00 ಲಕ್ಷಗಳಿಗೆ ಜಿಲ್ಲಾ ಪಂಚಾಯತಿಯು ಅಭಿವೃದ್ಧಿ ಯೋಜನೆಯನ್ನು ತಯಾರಿಸುವುದು ಹಾಗೂ ಅದರ ಅನುಮೋದನೆಯನ್ನು ನೀಡುವುದು.
2. ಈ ಅಭಿವೃದ್ಧಿ ಯೋಜನೆಯು, ಜಿಲ್ಲಾ ಪಂಚಾಯತಿಯ ಆಯವ್ಯಯ ಹಾಗು ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು. ಪ್ರತ್ಯೇಕವಾಗಿ ಅನುದಾನದ ಕಂತುವಾರು ಕ್ರಿಯಾ ಯೋಜನೆಯನ್ನು ತಯಾರಿಸುವುದನ್ನು ಪ್ರತಿಬಂಧಿಸಲಾಗಿದೆ.
3. ಜಿಲ್ಲಾ ಪಂಚಾಯತಿ ಅನುದಾನದಲ್ಲಿ ಬಿಡುಗಡೆಯಾಗುವ/ತಯಾರಿಸುವ ಅಭಿವೃದ್ಧಿ ಯೋಜನೆಗಳಲ್ಲಿ ಬಾಳಿಕೆ ಬರುವಂತಹ ಮೂಲಭೂತ ಸೌಕರ್ಯಗಳಿಗೆ ಆದ್ಯತೆ ನೀಡಬಹುದು.
4. ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವಾಗ ಗ್ರಾಮೀಣ ಪ್ರದೇಶದ ಜನರ ಜೀವನ ಮಟ್ಟವನ್ನು ಹೆಚ್ಚಿಸಲು ಅನುಕೂಲವಾಗುವಂತಹ ಕ್ಷೇತ್ರಗಳಾದ ಕುಡಿಯುವ ನೀರು, ನೈರ್ಮಲ್ಯ, ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ಪೌಷ್ಠಿಕಾಂಶ, ಶಾಲಾ ಅಭಿವೃದ್ಧಿ ಮುಂತಾದ ಯೋಜನೆಗಳಲ್ಲಿ ಅಳವಡಿಸಿಕೊಳ್ಳುವುದು.
5. ಗ್ರಾಮೀಣ ರಸ್ತೆಗಳ ನಿರ್ಮಾಣ ಮತ್ತು ಉನ್ನತೀಕರಣಕ್ಕಾಗಿ ಒಟ್ಟಾರೆ ಅನುದಾನದ ಶೇ.20ರಷ್ಟು ಮೀರದಂತೆ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದೆ.
6. ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಮೈಸೂರುರವರು ಏರ್ಪಡಿಸುವ ತರಬೇತಿ ಕಾರ್ಯಕ್ರಮಗಳಿಗೆ ಅನುದಾನವನ್ನು ಬಳಸಬಹುದು.
7. ಅಭಿವೃದ್ಧಿ ಯೋಜನೆಯನ್ನು ತಯಾರಿಸುವಾಗ ಯೋಜನೆಗಳಿಗೆ ಅವಶ್ಯಕತೆ ಇರುವ ಅನುದಾನವನ್ನು ಕಾಯ್ದಿರಿಸುವುದು..
8. ಈ ಕ್ರಿಯಾ ಯೋಜನೆಯು ಜಿಲ್ಲಾ ಕ್ರಿಯಾ ಯೋಜನೆಯ ಭಾಗವಾಗಿರಬೇಕು ಹಾಗೂ ಪಂಚತಂತ್ರ ಮತ್ತು ವರ್ಕ್‌ಸಾಫ್ಟ್ ತಂತ್ರಾಂಶದಲ್ಲಿ ಕ್ರಿಯಾ ಯೋಜನೆಯನ್ನು ಅಪ್‌ಲೋಡ್ ಮಾಡುವುದು.
9. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಲ್ಯಾಣಕ್ಕಾಗಿ ಕನಿಷ್ಠ ಶೇ.25 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವುದು.
10. ವಿಕಲಚೇತನರಿಗೆ ಅಭಿವೃದ್ಧಿ ಯೋಜನೆ ತಯಾರಿಸುವಾಗ ಶೇ.3 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವುದು.
11. ಲಿಂಗಾಧಾರಿತ ಆಯವ್ಯಯ ತಯಾರಿಸಿ ಅನುಷ್ಠಾನಗೊಳಿಸುವುದು.
12. ಜಿಲ್ಲಾ ಪಂಚಾಯತಿ ಸಭೆಯಲ್ಲಿ ಅಭಿವೃದ್ಧಿ ಯೋಜನೆಯ ಅನುಮೋದನೆ ಪಡೆಯುವುದು ಕಡ್ಡಾಯಗೊಳಿಸಿದೆ.
13. ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಚರ್ಚೆಯಾಗಿ ಅನುಮೋದನೆಗೊಂಡಿರುವ ಗ್ರಾಮ ಪಂಚಾಯತಿವಾರು ಕ್ರಿಯಾಯೋಜನೆಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳ ಗ್ರಾಮಸಭೆಯಲ್ಲಿ ಮಾಹಿತಿಗಾಗಿ ಮಂಡಿಸುವುದು.
14. ಅಭಿವೃದ್ಧಿ ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮವನ್ನು ಕಡ್ಡಾಯವಾಗಿ ಪಾಲಿಸುವುದು.
15. ಅಭಿವೃದ್ಧಿ ಯೋಜನೆಯ ಪ್ರಗತಿಯನ್ನು ಎರಡು ತಿಂಗಳಿಗೊಮ್ಮೆ ನಡೆಯುವ ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಕಡ್ಡಾಯವಾಗಿ ಪರಾಮರ್ಶೆ ನಡೆಸುವುದು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಾಮಗಾರಿವಾರು ವಿವರ ನೀಡುವುದು.
16. ಅಭಿವೃದ್ಧಿ ಯೋಜನೆ ಅನುಷ್ಠಾನಗೊಳಿಸುವಾಗ ಯೋಜನೆ ಪ್ರಾರಂಭಗೊಳ್ಳುವ ಪೂರ್ವದ ಪರಿಸ್ಥಿತಿ, ಅನುಷ್ಠಾನಗೊಳಿಸುತ್ತಿರುವಾಗ ಇರುವ ಪರಿಸ್ಥಿತಿ, ಪೂರ್ಣಗೊಂಡ ನಂತರದ ಪರಿಸ್ಥಿತಿಯ ಪೂರ್ಣ

ವರದಿ, ಎಲ್ಲಾ 3 ಹಂತಗಳ ಛಾಯಾಚಿತ್ರದೊಂದಿಗೆ ದಾಖಲೀಕರಿಸುವುದು ಮತ್ತು ಪ್ರತಿ ಕಾಮಗಾರಿಗೆ ಕಡತವನ್ನು ಇಡುವುದು. ಈ ರೀತಿ ದಾಖಲೀಕರಿಸಿದ ದಾಖಲೆಗಳನ್ನು ಪಂಚತಂತ್ರ ಮತ್ತು ವರ್ಕ್‌ಸಾಫ್ಟ್ ತಂತ್ರಾಂಶದಲ್ಲಿ ಅಳವಡಿಸುವುದು.

17. ಅನುಮೋದಿತ ಯೋಜನೆಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವುದರ ಜೊತೆಗೆ ವರ್ಕ್‌ಸಾಫ್ಟ್ ತಂತ್ರಾಂಶದಲ್ಲಿಯೂ ಸಹ ಪ್ರತಿ ಕಾಮಗಾರಿಯ ವಿವರಗಳನ್ನು ಹಂತವಾರು ದಾಖಲಿಸಬೇಕು.
18. ಪ್ರಗತಿ ವರದಿಯನ್ನು ಹಾಗು ಹಣ ಬಳಕೆ ಪ್ರಮಾಣ ಪತ್ರವನ್ನು ವರ್ಕ್‌ಸಾಫ್ಟ್ ಮತ್ತು ಪಂಚತಂತ್ರ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವುದು.
19. ಈ ಅನುದಾನದ ಕ್ರಿಯಾ ಯೋಜನೆಯು ಜಿಲ್ಲಾ ಪಂಚಾಯತಿಯ ಆಯವ್ಯಯ ಹಾಗೂ ಕ್ರೋಢಿಕೃತ ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು (ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 256, 258 ಹಾಗೂ ಅದರಡಿಯಲ್ಲಿ ರಚಿತವಾಗಿರುವ ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯತಿಗಳ ಹಣಕಾಸು ಮತ್ತು ಲೆಕ್ಕಗಳು) ನಿಯಮಗಳು, 1996ಕ್ಕೆ ಅನುಸಾರವಾಗಿ ಸಿದ್ಧಪಡಿಸಬೇಕು).
20. ಕಾಮಗಾರಿಗಳನ್ನು ಅನುಷ್ಠಾನ ಮಾಡುವಾಗ ಸಕ್ಷಮ ಪ್ರಾಧಿಕಾರಿಗಳಿಂದ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದು ಅನುಷ್ಠಾನಗೊಳಿಸಬೇಕು.
21. ಈ ಯೋಜನೆಯಲ್ಲಿ ಕೈಗೊಳ್ಳಲಾದ ಪ್ರತಿಯೊಂದು ಕಾಮಗಾರಿಗಳು ವಾರ್ಷಿಕ ಜಮಾಬಂಧಿಯಲ್ಲಿ ಸಾಮಾಜಿಕ ಲೆಕ್ಕಪರಿಶೋಧನೆಗೆ ಒಳಪಟ್ಟಿರುತ್ತದೆ.
22. ಜಿಲ್ಲಾ ಪಂಚಾಯತಿಗಳ ವಾರ್ಷಿಕ ಕ್ರಿಯಾ ಯೋಜನೆಯನ್ನು ಈ ಆದೇಶದ ದಿನಾಂಕದಿಂದ 15 ದಿನಗಳೊಳಗೆ ಜಿಲ್ಲಾ ಪಂಚಾಯತಿಗಳ ಕಛೇರಿಗಳ ಗೋಡೆಯ ಮೇಲೆ ಬರೆಯಿಸುವುದು.
23. ಜಿಲ್ಲಾ ಪಂಚಾಯತಿಗಳ ಅಭಿವೃದ್ಧಿ ಅನುದಾನದ ಬಳಕೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸರ್ಕಾರಕ್ಕೆ ಸಲ್ಲಿಸುವುದು.

**ಜಿಲ್ಲಾ ಪಂಚಾಯತಿ ಅಭಿವೃದ್ಧಿ ಅನುದಾನದಲ್ಲಿ ನಿಷೇಧಿತ ಕಾಮಗಾರಿಗಳು/ಕಾರ್ಯಗಳು:**

1. ಯಾವುದೇ ವ್ಯಕ್ತಿಯ ಹೆಸರಿನಲ್ಲಿ ಅಥವಾ ವೈಯುಕ್ತಿಕ ಜ್ಞಾಪಕಾರ್ಥದಲ್ಲಿ ಪ್ರತಿಮೆ ನಿರ್ಮಿಸುವುದು, ಆಸ್ತಿ ಗಳಿಸುವುದನ್ನು ಅಥವಾ ಕಟ್ಟಡಗಳನ್ನು ನಿರ್ಮಿಸುವುದನ್ನು;
2. ಧಾರ್ಮಿಕ ಕ್ಷೇತ್ರಗಳಿಗೆ ದೇಣಿಗೆ ನೀಡುವುದನ್ನು ಹಾಗು ಆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕಟ್ಟಡ ಅಥವಾ ಇತರ ಕಾಮಗಾರಿಗಳನ್ನು ತೆಗೆದುಕೊಳ್ಳುವುದನ್ನು;
3. ವೈಯುಕ್ತಿಕ ಫಲಾನುಭವಿಗಳಿಗೆ ಸಹಾಯಾನುದಾನ ಅಥವಾ ಸಾಲ ನೀಡುವುದನ್ನು;
4. ಕಚೇರಿಯ ಆವರ್ತಕ ವೆಚ್ಚ, ಸಿಬ್ಬಂದಿ ವೇತನ ಭರಿಸುವುದು.;
5. ಕಚೇರಿಯ ನಿರ್ವಹಣೆಗೆ ಅಗತ್ಯವಾಗಿರುವ ಸಾಧನಗಳ ಖರೀದಿ ಮಾಡುವುದನ್ನು;
6. ಸಾದಿಲ್ವಾರು ವೆಚ್ಚ ಮಾಡುವುದನ್ನು;
7. ವಾಹನಗಳ ಖರೀದಿ, ದುರಸ್ತಿ, ಇಂಧನ ವೆಚ್ಚ ಅಥವಾ ಬಾಡಿಗೆ ಮೇಲೆ ವಾಹನಗಳನ್ನು ಕಚೇರಿ ಕಾರ್ಯಕ್ಕಾಗಿ ಪಡೆಯುವುದನ್ನು;
8. ಖಾಸಗಿ ಸಂಸ್ಥೆಗಳಿಗೆ ಸಹಾಯ ನೀಡುವುದನ್ನು
9. ಬ್ಯಾಂಕಿನಿಂದ ಸ್ವಂತಕ್ಕೆ ಹಣ ಸೆಳೆಯುವ ಪ್ರಕ್ರಿಯೆ (ಇದನ್ನು ಉಲ್ಲಂಘಿಸಿದಲ್ಲಿ ಬ್ಯಾಂಕಿನಿಂದ ಹಣ ಸೆಳೆಯುವ ಅಧಿಕಾರಿ ಹಾಗೂ ಪಂ.ರಾಜ್ ಸಂಸ್ಥೆಯ ಪ್ರತಿನಿಧಿಗಳು ಆ ರೀತಿ ಸೆಳೆದ ಮೊತ್ತವನ್ನು ಶೇ. 15 ರ ಬಡ್ಡಿ ಮೊತ್ತದೊಂದಿಗೆ ಮರುಪಾವತಿ ಮಾಡುವುದರ ಜೊತೆಗೆ ಶಿಸ್ತುಕ್ರಮ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು)
10. ಈ ಅನುದಾನವನ್ನು ಯಾವುದೇ ಕಾರಣಕ್ಕೂ ಚುನಾಯಿತ ಪ್ರತಿನಿಧಿಗಳ ಉಪವೇಶನ ಶುಲ್ಕ, ಗೌರವಧನಕ್ಕಾಗಿ ಬಳಸುವುದನ್ನು ನಿಷೇಧಿಸಲಾಗಿದೆ.
11. ಈ ಅನುದಾನದಡಿಯಲ್ಲಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಮೈಸೂರುರವರು ಏರ್ಪಡಿಸುವ ತರಬೇತಿ ಕಾರ್ಯಕ್ರಮಗಳನ್ನು ಹೊರತುಪಡಿಸಿ ಬೇರೆ ಯಾವುದೇ ರೀತಿಯ ಪ್ರವಾಸ ಕಾರ್ಯಕ್ರಮಗಳಿಗಾಗಿ (exposure visits, study tours) ಅನುದಾನವನ್ನು ಬಳಸುವುದನ್ನು ನಿಷೇಧಿಸಲಾಗಿದೆ.

12. ಜಿಲ್ಲಾ ಪಂಚಾಯತಿ ಸದಸ್ಯವಾರು ಅನುದಾನ ಹಂಚಿಕೆ ಮಾಡುವುದನ್ನು ನಿಷೇಧಿಸಲಾಗಿದೆ.

**ಕಾರ್ಯಕ್ರಮ ಅನುಷ್ಠಾನದ ಕಾರ್ಯಸೂಚಿ:**

1. ಅಭಿವೃದ್ಧಿ ಯೋಜನೆಯ ತಯಾರಿಕೆ ಹಾಗು ಅನುಮೋದನೆ – ಏಪ್ರಿಲ್/ಮೇ ಮಾಹೆ
2. ಆಡಳಿತಾತ್ಮಕ ಅನುಮೋದನೆ/ತಾಂತ್ರಿಕ ಅನುಮೋದನೆ (ಸಕ್ಷಮ ಪ್ರಾಧಿಕಾರದಿಂದ) – ಮೇ, 15 ರಿಂದ ಜೂನ್ 30.
3. ಯೋಜನೆಯ ಅನುಷ್ಠಾನ – ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ ಮಾಹೆ –
4. ಸಾಮಾಜಿಕ ಲೆಕ್ಕಪರಿಶೋಧನೆ (ಜಮಾಬಂಧಿ) – ಆಗಸ್ಟ್ 16 ರಿಂದ ಸೆಪ್ಟೆಂಬರ್ 15
5. ಪ್ರಗತಿ ವರದಿ ಅಪ್ ಲೋಡ್ – ಪ್ರತಿ ಮಾಹೆ 1ರಿಂದ 5ನೇ ದಿನಾಂಕದೊಳಗೆ
6. ವಾರ್ಷಿಕ ಹಣ ಬಳಕೆ ಪ್ರಮಾಣ ಪತ್ರ – ಪ್ರತಿ ವರ್ಷದ ಏಪ್ರಿಲ್ ಮಾಹೆ
7. Non-embezzlement and Non-duplication ಧೃಢೀಕರಣ ಪತ್ರಗಳನ್ನು ಜಿಲ್ಲಾ ಪಂಚಾಯತಿಗೆ ಸಂಬಂಧಿಸಿದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
8. ಪ್ರತಿ ವರ್ಷ ಏಪ್ರಿಲ್ ಮಾಹೆಯಲ್ಲಿ ಯಶೋಗಾಥೆಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.

ಈ ಅನುದಾನವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ:244:ವೆಚ್ಚ-6:2013 ದಿನಾಂಕ:30-01-2014 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
12/02/14
(ಎಲ್.ಸಿ. ಬಸವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

12.02.14

**ಗೆ:**

(1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
(2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾಜ್ ಇಲಾಖೆ
(3) ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ
(4) ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು,
(5) ವಿಶೇಷಾಧಿಕಾರಿಗಳು (ಜಿ.ಪಂ) ಆರ್ಥಿಕ ಇಲಾಖೆ
(6) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ.ಪಂ. ಇಲಾಖೆ
(7) ಉಪ ನಿರ್ದೇಶಕರು, ಖಜಾನೆ ಗಣಕ ಜಾಲ, ಖನಿಜ ಭವನ, ಬೆಂಗಳೂರು.
(8) ಸಂಬಂಧಪಟ್ಟ ಜಿಲ್ಲಾ ಖಜಾನೆ ಅಧಿಕಾರಿಗಳು
(9) ಕಂಪ್ಯೂಟರ್ ಶಾಖೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ

ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ:68:ಜಿಪಸ:2013 ದಿನಾಂಕ: 12-02-2014

(₹ ಲಕ್ಷಗಳಲ್ಲಿ)

| ಸಂ | ಜಿಲ್ಲಾ ಪಂಚಾಯತಿಗಳ ಹೆಸರು | ಜಿಲ್ಲಾ ಪಂಚಾಯತಿಗಳಿಗೆ ನಿಗದಿಪಡಿಸಿರುವ ಅನುದಾನದ ವಿವರ | ಒಂದನೇ ಕಂತಿನ ಅನುದಾನ | ಎರಡನೇ ಕಂತಿನ ಅನುದಾನ | ಮೂರನೇ ಕಂತಿನ ಅನುದಾನ | ನಾಲ್ಕನೇ ಕಂತಿನ ಅನುದಾನ | ಒಟ್ಟು ಬಿಡುಗಡೆಯಾದ ಅನುದಾನ |
|---|---|---|---|---|---|---|---|
| 1. | ಬಾಗಲಕೋಟೆ | 200.00 | 50.00 | 50.00 | 50.00 | 50.00 | 200.00 |
| 2 | ಬೆಂಗಳೂರು(ಗ್ರಾ) | 200.00 | 50.00 | 50.00 | 50.00 | 50.00 | 200.00 |
| 3 | ಬೆಂಗಳೂರು(ನಗರ) | 200.00 | 50.00 | 50.00 | 50.00 | 50.00 | 200.00 |
| 4 | ಬೆಳಗಾಂ | 200.00 | 50.00 | 50.00 | 50.00 | 50.00 | 200.00 |
| 5 | ಬಳ್ಳಾರಿ | 200.00 | 50.00 | 50.00 | 50.00 | 50.00 | 200.00 |
| 6 | ಬೀದರ್ | 200.00 | 50.00 | 50.00 | 50.00 | 50.00 | 200.00 |
| 7 | ಬಿಜಾಪುರ | 200.00 | 50.00 | 50.00 | 50.00 | 50.00 | 200.00 |
| 8 | ಚಾಮರಾಜನಗರ | 200.00 | 50.00 | 50.00 | 50.00 | 50.00 | 200.00 |
| 9 | ಚಿಕ್ಕಬಳ್ಳಾಪುರ | 200.00 | 50.00 | 50.00 | 50.00 | 50.00 | 200.00 |
| 10 | ಚಿಕ್ಕಮಗಳೂರು | 200.00 | 50.00 | 50.00 | 50.00 | 50.00 | 200.00 |
| 11 | ಚಿತ್ರದುರ್ಗ | 200.00 | 50.00 | 50.00 | 50.00 | 50.00 | 200.00 |
| 12 | ದಕ್ಷಿಣ ಕನ್ನಡ | 200.00 | 50.00 | 50.00 | 50.00 | 50.00 | 200.00 |
| 13 | ದಾವಣಗೆರೆ | 200.00 | 50.00 | 50.00 | 50.00 | 50.00 | 200.00 |
| 14 | ಧಾರವಾಡ | 200.00 | 50.00 | 50.00 | 50.00 | 50.00 | 200.00 |
| 15 | ಗದಗ್ | 200.00 | 50.00 | 50.00 | 50.00 | 50.00 | 200.00 |
| 16 | ಗುಲ್ಬರ್ಗಾ | 200.00 | 50.00 | 50.00 | 50.00 | 50.00 | 200.00 |
| 17 | ಹಾಸನ | 200.00 | 50.00 | 50.00 | 50.00 | 50.00 | 200.00 |
| 18 | ಹಾವೇರಿ | 200.00 | 50.00 | 50.00 | 50.00 | 50.00 | 200.00 |
| 19 | ಕೊಡಗು | 200.00 | 50.00 | 50.00 | 50.00 | 50.00 | 200.00 |
| 20 | ಕೋಲಾರ | 200.00 | 50.00 | 50.00 | 50.00 | 50.00 | 200.00 |
| 21 | ಕೊಪ್ಪಳ | 200.00 | 50.00 | 50.00 | 50.00 | 50.00 | 200.00 |
| 22 | ಮಂಡ್ಯ | 200.00 | 50.00 | 50.00 | 50.00 | 50.00 | 200.00 |
| 23 | ಮೈಸೂರು | 200.00 | 50.00 | 50.00 | 50.00 | 50.00 | 200.00 |
| 24 | ರಾಯಚೂರು | 200.00 | 50.00 | 50.00 | 50.00 | 50.00 | 200.00 |
| 25 | ರಾಮನಗರ | 200.00 | 50.00 | 50.00 | 50.00 | 50.00 | 200.00 |
| 26 | ಶಿವಮೊಗ್ಗ | 200.00 | 50.00 | 50.00 | 50.00 | 50.00 | 200.00 |
| 27 | ತುಮಕೂರು | 200.00 | 50.00 | 50.00 | 50.00 | 50.00 | 200.00 |
| 28 | ಉತ್ತರ ಕನ್ನಡ | 200.00 | 50.00 | 50.00 | 50.00 | 50.00 | 200.00 |
| 29 | ಉಡುಪಿ | 200.00 | 50.00 | 50.00 | 50.00 | 50.00 | 200.00 |
| 30 | ಯಾದಗಿರಿ | 200.00 | 50.00 | 50.00 | 50.00 | 50.00 | 200.00 |
| | ಒಟ್ಟು | **6000.00** | **1500.00** | **1500.00** | **1500.00** | **1500.00** | **6000.00** |

12/02/14

Under Secy. to Govt. (ZP)
Rural Devt. & Panchayat Raj. Dept.

12.02.14

